ಸಿ.ಸಿ .ನಂ. 212/2022 ಪಿಡಬ್ಲೂಃ 1

ದಿನಾಂಕಃ 11-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

4. ಬಿಸಿನೆಸ್ ಇದು ಬಹಳ ದೊಡ್ಡ ಅರ್ಥ ಕಲ್ಪಿಸುತ್ತದೆ ಎಂದರೆ ಸರಿ . ನಾನು ನೀಡಿದ ನೋಟಿನಲ್ಲಾಗಲೀ ನನ್ನ ಫಿರ್ಯಾದಿನಲ್ಲಾಗಲೀ , ನನ್ನ ಉದ್ಯೋಗ ಇಂತಹದ್ದೇ ಎಂದು ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ . 2020 ರ ಪೂರ್ವ ನಾನು ಬೇರೆಯವರ ಹತ್ತಿರ ಸೆಮಿ ಗುತ್ತಿಗೆ ವ್ಯವಹಾರ ತೆಗೆದುಕೊಂಡು ಮಾಡುತ್ತಿದ್ದೆ. ಸೆಮಿ ಗುತ್ತಿಗೆ ಪಡೆಯುತ್ತಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿಲ್ಲ . ಆ ರೀತಿಯ ಉದ್ಯೋಗ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ. 2020 ರ ಪೂರ್ವದಲ್ಲಿ ನಾನು ಎಸ್ ಬಿ ಐ , ಐಸಿಐಸಿಐ ಬ್ಯಾಂಕ್ ಹಾಗೂ ಲೋಕಲ್ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿರುತ್ತೇನೆ . ಸೆಮಿ ಗುತ್ತಿಗೆಯಲ್ಲಿ ಅವರು ನಮಗೆ ಕ್ಯಾಶ್ ರೂಪದಲ್ಲಿ ಹಣವನ್ನು ಕೊಡುತ್ತಾರೆ . ಮೌಖಿಕವಾಗಿ ಗುತ್ತಿಗೆ ವ್ಯವಹಾರವನ್ನು ತೆಗೆದುಕೊಳ್ಳುತ್ತಿದ್ದೆ. ನಾನು ಬ್ಯಾಂಕಿನ ಮೂಲಕ ಯಾವುದೇ ವ್ಯವಹಾರವನ್ನು ಮಾಡದೇ ಬಿಸನೆಸ್ ಎಂಬ ಪದವನ್ನು ಬಳಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಾನು ನನ್ನ ಉದ್ಯೋಗವನ್ನು ಹೆಸರಿಸಲು ಆಗದೇ ಬಿಸಿನೆಸ್ ಎಂಬ ಪದವನ್ನು ಉಪಯೋಗಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸ್ವಲ್ಪ ಹಣ ನೆಟ್ಟ ಮೂಲಕ ಹಾಗೂ ದೊಡ್ಡ ಹಣವಾದರೆ ಚೆಕ್ ಮುಖಾಂತರ ನನ್ನ ಬ್ಯಾಂಕ್ ಖಾತೆಗೆ ಬರುತ್ತಿತ್ತು . ನಾನು ಈ ವಿಷಯವನ್ನು ಸಂಕ್ಷಿಪ್ತವಾಗಿ ನನ್ನ ಫಿರ್ಯಾದಿ ಹಾಗೂ ನನ್ನ ನೋಟಿಸಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ .

ಪಿಡಬ್ಲೂಃ 1

5. ನಾನು ಹಾಜರು ಪಡಿಸಿದ ಚೆಕ್ ನ್ನು ಬ್ಯಾಂಕನವರು ಅದರ ರಿಜನ್ ಎಂದು ಬರೆದು ಹಿಂಬರಹ ಕೊಟ್ಟಿದ್ದಾರೆ . ಇವತ್ತಿನವರೆಗೆ ನಾನು ಅದು ಯಾವ ರಿಜನ್ ಎಂದು ಬ್ಯಾಂಕಿನಿಂದ ತಿಳಿದುಕೊಂಡು ನ್ಯಾಯಾಲಯಕ್ಕೆ ಹೇಳಲು ತೊಂದರೆ ಇರಲಿಲ್ಲ . ಅದರ ರಿಜನ್ ಎಂದರೆ ಏನು ಎಂದು ತಿಳಿದುಕೊಳ್ಳಲು ಬ್ಯಾಂಕನವರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ಅದರ ರಿಜನ್ ಎಂದು ಹೇಳಿರುವುದು ಈ ಪ್ರಕರಣ ನಡೆಯಲು ಕಾರಣವಲ್ಲ ಎಂದರೆ ಸರಿಯಲ್ಲ . ನನ್ನ ಹಾಗೂ ಆರೋಪಿಯ ಪರಿಚಯವಿತ್ತು ಎಂದು ತೋರಿಸಲು ನ್ಯಾಯಾಲಯದಲ್ಲಿ ಹೇಳಿರುವುದನ್ನು ಬಿಟ್ಟರೆ ಬೇರೆ ಯಾವುದೇ ಸಾಕ್ಷ ಇಲ್ಲ ಎಂದರೆ ಸಾಕ್ಷಿ ಆದರೆ ಅವರು ನನಗೆ ಪರಿಚಯ ಎಂದು ನುಡಿದಿರುತ್ತಾರೆ . ನಾನು ನೋಟಿಸನ್ನು ಕೊಟ್ಟ ನಂತರ ಆರೋಪಿ ನನ್ನ ಬಳಿ ಬಂದೇ ಇಲ್ಲ . ಮೂರು ತಿಂಗಳ ನಂತರ ಬಂದು ನಿಮ್ಮ ಹಣ ಕೊಡುತ್ತೇನೆ ಎಂದು , ಈಗ ಬೋಟಿ ಬಂದ್ ಇದೆ, ಅಡವಾನ್ಸ ಹಣ ಬಂದ ನಂತರ ಹಣ ಕೊಡುತ್ತೇನೆ ಎಂದು ಹೇಳಿದರು. ನಾನು ಹೇಳಿದಂತೆ ಆರೋಪಿ ಕೇಳಿಲ್ಲ , ಆರೋಪಿ ನನ್ನ ನಿಮ್ಮ ನಡುವೆ ಯಾವುದೇ ವ್ಯವಹಾರ ಇಲ್ಲ , ಏಕೆ ನೋಟಿಸನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ನನ್ನ ಭಾವ ರಾಜು ಮಾಸ್ತರ ಇವರಿಗೆ ಕೊಟ್ಟಂತಹ ಚೆಕ್ ನ್ನು ಹಾಕಿದ್ದೇನೆ ಎಂದು ಹೇಳಿದೆ ಎಂದರೆ ಸುಳ್ಳು. ರಾಜು ಮಾಸ್ತರ ಇವರು ನನ್ನ ಭಾವ ಎಂದರೆ ಸರಿಯಲ್ಲ. ನನ್ನ ಭಾವನಿಗೆ ಬೇರೆ ವ್ಯವಹಾರದಲ್ಲಿ ನೀಡಿರುವ ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನನಗೆ ಯಾವುದೇ ರೀತಿಯ ಹಣವನ್ನು ಯಾರಿಗೂ ಕೊಡುವ ತಾಕತ್ತು ಇಲ್ಲ ಹಾಗೂ ನನಗೆ ಯಾವುದೇ ಸರಿಯಾದ ಉದ್ಯೋಗ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಚೆಕ್ ನನ್ನ ಭಾವನಿಗೆ ಕೊಟ್ಟಂತಹ ಚೆಕ್ ಗಳು ಆ ಎಲ್ಲಾ ಚೆಕ್ ಗಳನ್ನು ನಾನು ನ್ಯಾಯಾಲಯದಲ್ಲಿ ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸುಳ್ಳು . ಆರೋಪಿಗೆ ನನ್ನಿಂದ ಹಣ ತೆಗೆದುಕೊಳ್ಳುವ ಯಾುವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಹೇಳಿದಂತೆ ನನ್ನ ಹಾಗೂ ಅವರ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ . ನನಗೆ ಸರಿಯಾದ ಉದ್ಯೋಗ ಇಲ್ಲದ ಕಾರಣ ಹಾಗೂ ಸರಿಯಾದ ಆದಾಯವಿಲ್ಲದ ಕಾರಣ ನಾನು ನನ್ನ

ಆದಾಯ ಮತ್ತು ಉದ್ಯೋಗದ ಬಗ್ಗೆ ಘೋಷಣೆ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಘೋಷಣೆ ಮಾಡಬಹುದು ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.